ದಿನಾಂಕ : 27.06.2025 ರಂದು ಪ್ರಮಾಣ ವಚನ ಭೋದಿಸಲಾಯಿತು.

**<u>ಪಾಟೀ ಸವಾಲುಃ</u>** <u>ಪ್ರತಿವಾದಿ ಪರ</u> **<u>ಶ್ರೀ</u>** <u>ಜಿ.ಎಂ.ಆರ್.</u> **<u>ವಕೀಲರಿಂದ,</u>**

ನಾನು ಡಿಪ್ಲೋಮ್ ಓದಿರುತ್ತೇನೆ. ಸಫೆರಾ ಬಿ ರವರಿಗೆ ಮೂರು ಜನ ಮಕ್ಕಳು ಇರುತ್ತಾರೆ ಅವರಲ್ಲಿ ಒಬ್ಬರು ಅಂದರೆ ಅಹಮದುಲ್ಲ ರವರು ತೀರಿಕೊಂಡಿರುತ್ತಾರೆ. ಅವರಿಗೆ ನಾಲ್ಕು ಜನ ಹೆಣ್ಣು ಮಕ್ಕಳು ಇರುತ್ತಾರೆ. ಗಂಡು ಮಕ್ಕಳಲ್ಲಿ ಅಹಮದುಲ್ಲ ದೊಡ್ಡವರು ಎಂದರೆ ಸಾಕ್ಷಿಯು ಇಲ್ಲ ಇಬ್ರಾಹಿಂ ದೊಡ್ಡವರು ಎಂದು ನುಡಿಯುತ್ತಾರೆ. ಅಹಮದುಲ್ಲ ಮತ್ತು ಅಕ್ರಮ್ ನಡುವೆ ಈ ವ್ಯವಹಾರ ಆಗಿತ್ತು ಎಂದರೆ ಸರಿ . ಈ ವ್ಯವಹಾರ ಆದ ಮೇಲೆ ನಮ್ಮ ತಾಯಿಯನ್ನು ಕರೆದುಕೊಂಡು ಹೋಗಿ ಪ್ರಾಮಿಸರಿ ನೋಟ್ ಅನ್ನು ಬರೆರಿ ಎಂದು ಹೇಳಿದರು ಎಂದರೆ ಸರಿ. ಸಫೆರಾ ಬಿ ಅಕ್ರಮ್ ರವರಿಗೆ ಹಣ ಕೊಟ್ಟಿಲ್ಲ ಅಹಮದುಲ್ಲ ರವರು ಹಣ ಕೊಟ್ಟಿರುತ್ತಾರೆ ಎಂದರೆ ಸರಿ. ಈ ವ್ಯವಹಾರಕ್ಕೆ ಸಂಬಂಧಪಟ್ಟಂತೆ ನಾವು ಅಪರಾಧ ಸಂಖ್ಯೆ 237/2017 ಅನ್ನು ಐದು ಜನರ ವಿರುದ್ದ ಮಾಡಿರುತ್ತೇವೆ ಎಂದರೆ ಸರಿ. ಪ್ರಾಮಿಸರಿ ನೋಟ್ ಬರೆಯುವಾಗ ನಾನು ಅಲ್ಲಿ ಇರಲಿಲ್ಲ ಎಂದರೆ ಸರಿ. ವ್ಯವಹಾರ ಆದಾಗ ಸಫೆರಾ ಬಿ ಮತ್ತು ಅಹಮದುಲ್ಲ ಜೊತೆಗೆ ಮತ್ತೆ ಯಾರ್ಯಾರು ಇದ್ದರು ಎಂದು ನನಗೆ ಗೊತ್ತಿಲ್ಲ. ಯಾರು ಯಾರಿಗೆ ಎಲ್ಲಿಂದ ಹಣ ತಂದು ಕೊಟ್ಟರು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಎಷ್ಟು ಮುಖ ಬೆಲೆಯ ನೋಟ್ ಅನ್ನು ಕೊಟ್ಟರು ಎಂದು ನನಗೆ ಗೊತ್ತಿಲ್ಲ. ನನ್ನ ಮುಖ್ಯವಿಚಾರಣೆ ಪ್ರಮಾಣ ಪತ್ರದಲ್ಲಿ ಏನು ವಿಷಯ ಇರುತ್ತದೆ ಎಂದು ನನಗೆ ಗೊತ್ತಿಲ್ಲ.

2. ಅಕ್ರಮ್ ರವರು ಯಾವಾಗ ಬಂದು ಹಣವನ್ನು ಕೇಳಿದರು ಎಂದು ನನಗೆ ಗೊತ್ತಿಲ್ಲ. ನಾವು ಈ ಕೇಸ್ ಅನ್ನು ನಾಲ್ಕು ಪ್ರಾಮಿಸರಿ ನೋಟ್ ಗಳಂತೆ ಪ್ರತಿ ಒಂದಕ್ಕೆ 50,000/- ರೂಪಾಯಿ ಕೊಟ್ಟಿರುತ್ತಾರೆ ಎಂದು ಹಾಕಿರುತ್ತೇನೆ ಎಂದರೆ ಸರಿ. ನಿಮ್ಮ ತಾಯಿ ಅಕ್ರಮ್ ವಿರುದ್ಧ ಒಟ್ಟು ಎಷ್ಟು ಕೇಸ್ಸ್ ಗಳನ್ನು ಹಾಕಿರುತ್ತಾರೆ ಎಂದರೆ ಸಾಕ್ಷಿಯು ಒಂದು ಕೇಸ್ ಅನ್ನು ಹಾಕಿರುತ್ತಾರೆ ಎಂದು ನುಡಿಯುತ್ತಾರೆ. ಎಷ್ಟು ಬಡ್ಡಿಗೆ ಹಾಕಿದ್ದರು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಈ ಕೇಸ್‌ಗಳನ್ನು ಎಷ್ಟು ಬಡ್ಡಿಗೆ ಹಾಕಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸಫೆರಾ ಬಿ ರವರು ಅಕ್ರಮ್ ರವರಿಗೆ ಹಣವನ್ನು ಕೊಟ್ಟಿರುವುದಿಲ್ಲ ನಾವು ಪ್ರಾಮಿಸರಿ ನೋಟ್‌ಗಳನ್ನು ಸೃಷ್ಟಿ ಮಾಡಿ ನ್ಯಾಯಾಲಯಕ್ಕೆ ಹಾಕಿರುತ್ತೇವೆ ಎಂದರೆ ಸರಿಯಲ್ಲ. ಈ ಕೇಸ್ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ನ್ಯಾಯಾಲಯಕ್ಕೆ ಬಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗೆ ಅವಮಾನ ಮಾಡಲು ಮತ್ತು ಕಿರುಕುಳ ನೀಡಲು ಈ ಸುಳ್ಳು ದಾವೆಯನ್ನು ಹಾಕಿರುತ್ತೇವೆ ಎಂದರೆ ಸರಿಯಲ್ಲ. ನನ್ನ ತಾಯಿಯ ಆರೋಗ್ಯ ಸರಿ ಇದ್ದರೂ ಕೂಡ ಅವರು ನ್ಯಾಯಾಲಯಕ್ಕೆ ಬಂದರೆ ನಿಜಾಂಶ ಗೊತ್ತಾಗುತ್ತದೆ ಎಂಬ ಕಾರಣಕ್ಕೆ ನಾನು ಅವರಿಂದ ಜಿಪಿಎ ಪಡೆದುಕೊಂಡು ನ್ಯಾಯಾಲಯದ ಮುಂದೆ ಬಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ,**

( ನನ್ನ ಹೇಳಿಕೆಯಂತೆ ಮುಕ್ತನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ,

ಸೀನಿಯರ್ ಸಿವಿಲ್ ನ್ಯಾಯಾಧೀಶರು, ಸಿರುಗುಪ್ಪ.